ಹಿಂದುಳಿದವರ, ಹರಿಜನ ಗಿರಿಜನರ ಹಿತವನ್ನು ನೋಡುತ್ತಿಲ್ಲವಾದ್ದರಿಂದ ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ನಾನು ಹೇಳುತ್ತೇನೆ. ಈ ದೊಡ್ಡ ಅಧಿಕಾರಿಗಳು ಬೇರೆ ಯಾರೂ ಅಲ್ಲ. ಇವರು ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ॥ ನಂಜುಂಡಪ್ಪನವರು. ಇವರು ತಕ್ಷಣ ಆ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಹಾಗೂ ಏನು ಇಲ್ಲಿ ಎಸ್.ಸಿ ಸಂಸ್ಥೆಯವರು ಕಾಲೇಜು ತೆರೆಯಲು ಮುಂದೆ ಬಂದಿದ್ದಾರೆ ಅವರಿಗೆ ಪರವಾನಿಗೆ ಕೊಡಬೇಕೆಂದು ಮಾನ್ಯ ವಿದ್ಯಾ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಸಚಿವರು).—ಫಸ್ಟ್ ಗ್ರೇಡ್ ಕಾಲೇಜನ್ನು ತೆರೆಯಬೇಕಾದ ಸೆಪ್ಟೆಂಬರ್ ತಿಂಗಳೊಳಗೆ ಆಯಾಯ ವಿಶ್ವವಿದ್ಯಾನಿಲಯಗಳಿಗೆ ಅರ್ಜಿ ಹಾಕಿಕೊಳ್ಳಬೇಕು. ಅವರಿಂದ ಪರವಾನಿಗೆ ಬಂದ ಮೇಲೆ ನಾವು ಅಫಿಲಿಯೇಷನ್ ಕೊಡಬೇಕೇ ಬೇಡವೇ ಎಂಬುದನ್ನು ಪರಿಶೀಲನೆ ಮಾಡುತ್ತೇವೆ. ಈ ಪ್ರೊಸೀಜರ್‌ನಿಂದ ಅದು ತಡವಾಗಿದೆ. ಅದು ಬಂದ ಮೇಲೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಗ್ಗಪ್ಪ.—ಆ ಬಗ್ಗೆ ಅರ್ಜಿ ಕೊಟ್ಟಿದ್ದು ೭೫೦ ರೂಪಾಯಿಗಳ ಅಫಿಲಿಯೇಷನ್ ಫೀ ಸಹಾ ತುಂಬಿದ್ದೇವೆ. ಆ ಬಗ್ಗೆ ಅವರು ಶಿಫಾರಸ್ಸು ಕಳುಹಿಸಿದ್ದು ಅದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಎಸ್.ಸಿ. ಸಂಸ್ಥೆಗೆ ಈ ಬಗ್ಗೆ ಕಾಲೇಜು ತೆಗೆಯಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ರಾಚಯ್ಯ.—ವಿಶ್ವವಿದ್ಯಾನಿಲಯ ಅಟಾನಮಸ್ ಬಾಡಿ ಇದೆ. ಕಳೆದ ವರ್ಷ ನಾರ್ತ್ ಕೆನರ ಜಿಲ್ಲೆಯಲ್ಲಿ ಈ ರೀತಿ ಒಂದು ಕಾಲೇಜೂ ಇಲ್ಲ ಆದ್ದರಿಂದ ಅಲ್ಲಿಗೆ ಒಂದು ಕಾಲೇಜು ಕೊಡಬೇಕೆಂದ ಕೇಳಿದ್ದರು. ಆದರೆ ಕರ್ನಾಟಕ ವಿಶ್ವವಿದ್ಯಾನಿಲಯದವರಿಂದ ಆಫಿಲಿಯೇಷನ್‌ಗೆ ಶಿಫಾರಸ್ಸು ಬರಲಿಲ್ಲ. ಆದುದರಿಂದ ಅದನ್ನು ಜಾರಿಗೆ ಕೊಡುವುದಕ್ಕೆ ಆಗಲಿಲ್ಲ. ಅದೇ ಕಂಡೀಷನ್ನೂ ಇದಕ್ಕೂ ಕೂಡಾ ಜಾರಿಯಾಗುತ್ತದೆ.

(೧೪)ಕರ್ನಾಟಕ ರಾಜ್ಯ ಸರ್ಕಾರಿ ಸಾಬೂನು ಕಾರ್ಖಾನೆ, ಬೆಂಗಳೂರಿನಲ್ಲಿ ಕೆಲಸವನ್ನು ನಿಲ್ಲಿಸಿರುವುದರಿಂದ ರಾಜ್ಯ ಸರ್ಕಾರಕ್ಕೆ ನಷ್ಟವುಂಟಾಗುತ್ತಿರುವ ಬಗ್ಗೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸರ್ಕಾರಿ ಸಾಬೂನು ಕಾರ್ಖಾನೆ, ಬೆಂಗಳೂರು ನಗರದಲ್ಲಿರತಕ್ಕ ಈ ಕಾರ್ಖಾನೆ ಕೆಲಸವನ್ನು ನಿಲ್ಲಿಸಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ನಷ್ಟವಾಗಿರುವ ಬಗ್ಗೆ ಮತ್ತು ಈ ಕಾರ್ಖಾನೆ ಮುಚ್ಚಲು ಕಾರಣರಾಗಿರತಕ್ಕ ಭ್ರಷ್ಟ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಯಪ್ಪ ಎನ್ನುವವರೇ, ಆಗಿರುವುದರಿಂದ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಈ ಕಾರ್ಖಾನೆ ಮುಚ್ಚಿ ಒಂದು ತಿಂಗಳಾಯಿತು ಅಲ್ಲಿ ಮುಷ್ಕರ ನಡೆಯುತ್ತಿದೆ. ಮುಷ್ಕರ ನಡೆಯುವುದಕ್ಕೆ ಕಾರಣವೇನೆಂದರೆ ೬ ಜನರನ್ನು ಅದರಲ್ಲೂ ಹರಿಜನರನ್ನೇ ಡಿಸ್‌ಮಿಸ್ ಮಾಡಿರುವುದೇ ಕಾರಣವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಪ್ರಸ್ತಾಪ ಮಾಡಲಾಗಿದೆ ಇದರ ಬಗ್ಗೆ ಮಾನ್ಯ ಶ್ರೀ ಕೃಷ್ಣನ್ ರವರು ಕೂಡ ಪ್ರಸ್ತಾಪ ಮಾಡಿ ಹೇಳಿದ್ದರು. ಲೇಬರ್ ಡಿಪಾರ್ಟ್‌ಮೆಂಟ್‌ನ ಬೇಡಿಕೆಗೆ ಉತ್ತರ ಕೊಡತಕ್ಕ ಸಮಯದಲ್ಲಿ ನಾನೇ ಉತ್ತರ ಕೊಟ್ಟಿದ್ದೇನೆ. ಆದಾದ ನಂತರ ಮಾನ್ಯ ಕಾರ್ಮಿಕ ಮಂತ್ರಿಗಳವರು ಮತ್ತು ಶ್ರೀ ಬೊಮ್ಮಾಯ್‌ರವರು ಶ್ರೀ ಸೂರ್ಯನಾರಾಯಣ್ ರಾವ್ ಮತ್ತು ಕೃಷ್ಣನ್‌ರವರೊಡನೆ ಸಭೆ ಸೇರಿ ಯಾವ ರೀತಿಯಾಗಿ ಈ ಸಮಸ್ಯೆಯನ್ನು ಬಗೆಹರಿಸಬಹುದು ಎನ್ನುವ ಬಗ್ಗೆ ಚರ್ಚೆ ಮಾಡಿದ್ದಾರೆ.....

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ನಾನು ಹೇಳುತ್ತಿರುವುದು ಏನೆಂದರೆ ೬ ಜನ ಏನು ಡಿಸ್‌ಮಿಸ್ ಆಗಿದ್ದಾರೆ ಅದರಲ್ಲಿ ಹರಿಜನರೇ ಇದ್ದಾರೆ ಬೇರೆಯವರು ಯಾರು ಇಲ್ಲ. ಇವತ್ತಿನ ದಿವಸಕ್ಕೆ ಇಷ್ಟು ಲಾಸ್ ಆಗುತ್ತಿರುವುದಕ್ಕೆ ಕಾರಣರಾಗಿರತಕ್ಕ ಆ ಎಂ. ಡಿ. ಜಯಪ್ಪ ಏನಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಕೇವಲ ಹರಿಜನರನ್ನೇ ಡಿಸ್‌ಮಿಸ್ ಮಾಡಿರುವುದಕ್ಕೆ ಕಾರಣವೇನು ? ಹರಿಜನರನ್ನೇ ಡಿಸ್‌ಮಿಸ್ ಮಾಡತಕ್ಕದ್ದು ಸರ್ಕಾರದವರ ಉದ್ದೇಶವೇ ಎಂದು ಪ್ರಶ್ನೆ ಮಾಡಬೇಕಾಗಿದೆ.....

ಶ್ರೀ ಲಕ್ಷ್ಮೀಸಾಗರ್.—ನನ್ನ ಹಶ್ತರ ಅದರ ಬಗ್ಗೆ ಏನೂ ಮಾಹಿತಿ ಇಲ್ಲ.

ಉಪಾಧ್ಯಕ್ಷರು.—ಮಾಹಿತಿ ತರಿಸಿಕೊಳ್ಳಿ.....

ಶ್ರೀ ಗೋಪಾಲ ಮುಕುಂದ ಕಾನಡೆ —ಡಿಸ್‌ಮಿಸ್ ಮಾಡಿರತಕ್ಕ ೬ ಜನರನ್ನು ವಾಪಸ್ಸು ತೆಗೆದು ಕೊಂಡರೆ ಈ ಎಲ್ಲಾ ತಾಪತ್ರಯ ಸರಿ ಹೋಗುತ್ತದೆ. ಮತ್ತು ಫ್ಯಾಕ್ಟರಿ ಕೂಡ ಚೆನ್ನಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ನಾನು ಇಲ್ಲಿ ಹತ್ತಾರು ಸಲ ಪ್ರಸ್ತಾಪ ಮಾಡಿ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾವು ಸಹ ಹಿಂದೆ ಪ್ರಸ್ತಾಪ ಮಾಡಿ ಹೇಳಿದ್ದೇವೆ. ಅಲ್ಲಿ ಹರಿಜನರನ್ನು ಡಿಸ್‌ಮಿಸ್ ಮಾಡಿದ್ದಾರೆ ಎಂದು ಜಾತೀಯತೆ ಯನ್ನು ಎತ್ತಿ ಕಟ್ಟುವುದು ಸರಿಯಲ್ಲ. ನಾವು ಕೂಡ ಯೂನಿಯನ್ನಿನ ಮುಖಂಡರು ಆಗಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ —ನಾನು ಇಲ್ಲಿ ಜಾತೀಯತೆಯನ್ನು ಎತ್ತಿ ಕಟ್ಟುತ್ತಿಲ್ಲ. ಇರುವ ವಿಷಯವನ್ನೇ ಹೇಳುತ್ತಿದ್ದೇನೆ. ಇವತ್ತಿನ ದಿವಸ ಅಲ್ಲಿ ಡಿಸ್‌ಮಿಸ್ ಆಗಿರತಕ್ಕವರು ಹರಿಜನರೇ ಆಗಿದ್ದಾರೆ. ಇಲ್ಲವೆಂದರೆ ನಾನು ಎಂ.ಎಲ್.ಎ. ಗಿರಿಗೆ ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ವಿಷಯ ಗೊತ್ತಿಲ್ಲದೇ ನಾವು ಏನೇನೋ ಮಾತನಾಡುತ್ತಿದ್ದೀರಿ. ಮಾತನಾಡುವುದಕ್ಕೆ ಹಕ್ಕು ಇದೆ ಎಂದು ಏನು ಬೇಕಾದರೂ ಮಾತನಾಡಬಹುದೆಂದು ಅಲ್ಲ. ಅಲ್ಲಿ ಸತ್ಯಾಗ್ರಹ, ಹೋರಾಟ ನಡೆಯುತ್ತಿದೆ ಇಲ್ಲವೆಂದು ಇಲ್ಲ, ನಮ್ಮ ಯೂನಿಯನ್‌ನವರೂ ಸಹ ಈ ಪ್ರಶ್ನೆಯ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಆಗಾಗಲೇ ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಲೇಬರ್ ಮಿನಿಸ್ಟರ್‌ರವರು ಮತ್ತು ಇಂಡಸ್ಟ್ರೀ ಮಿನಿಸ್ಟರ್‌ರವರು ಇದರ ಬಗ್ಗೆ ಸಂಬಂಧಪಟ್ಟವರೊಡನೆ ಚರ್ಚೆ ನಡೆಸುತ್ತಿದ್ದಾರೆ. ಇನ್ನು ಯಾವ ರೀತಿಯಾಗಿ ಅವರಿಗೆ ಉತ್ತರ ಹೇಳಬೇಕೋ ಗೊತ್ತಾಗುತ್ತಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.–ದುರಾದೃಷ್ಟವೆನೆಂದರೆ ಹತ್ತಾರು ಬಾರಿ ಚರ್ಚೆ ನಡೆದಿದೆ,ಚರ್ಚೆ ಇನ್ನೂ ಮುಂದುವರಿಯುತ್ತಿದೆ ಆದರೆ ಈ ಪ್ರಶ್ನೆ ಇನ್ನೂ ಇತ್ಯರ್ಥಕ್ಕೆ ಬಂದಿಲ್ಲ. ದಿನೇ ದಿನೇ ಇದು ಹೀಗೆಯೇ ಮುಂದುವರೆಯುತ್ತಾ ಫ್ಯಾಕ್ಟರಿ ಮುಚ್ಚಿದ್ದರೆ ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂ.ಗಳ ಹಣ ಲಾಸ್ ಆಗುವುದಿಲ್ಲವೇ ? ಆದುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಈ ರೀತಿಯಾಗಿ ಲಾಸ್ ಆಗುವುದಕ್ಕೆ ಅಲ್ಲಿಯ ಸಂಬಂಧಪಟ್ಟ ಅಧಿಕಾರಿಗಳೂ ಕಾರಣರಾಗಿರುತ್ತಾರೆ. ಆದುದರಿಂದ ಇದು ಹೀಗೆ ಮುಂದುವರಿಯುವುದಕ್ಕೆ ಅವಕಾಶ ಕೊಡದೇ ಈ ಪ್ರಶ್ನೆಯನ್ನು ಬೇಗನೇ ಇತ್ಯರ್ಥ ಮಾಡಬೇಕೆಂದು ನಾನು ಸಹ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

(೧೫) ದಾವಣಗೆರೆ ತಾಲ್ಲೂಕಿನ ಕಿತ್ತೂರು ಗ್ರಾಮದಲ್ಲಿ ಬಾವಿ ತೋಡುತ್ತಿರುವಾಗ ದಡ ಕುಸಿದು ಬಿದ್ದು ಇಬ್ಬರು ಮರಣ ಹೊಂದಿದ ಬಗ್ಗೆ

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ೩-೪-೧೯೮೪ರಂದು ಯುಗಾದಿ ಹಬ್ಬದ ದಿವಸ ದಾವಣಗೆರೆ ತಾಲ್ಲೂಕಿನ, ಕಿತ್ತೂರು ಗ್ರಾಮದಲ್ಲಿ ಕುಡಿಯಲು ನೀರು ತರಲು ಬಾವಿಯ ಒಳಕ್ಕೆ ಹೋಗಿ ಹೂಳು ತೆಗೆಯುತ್ತಿದ್ದಾಗ ಶ್ರೀ ಬಸವರಾಜ್ ಮತ್ತು ಸುಭಾಷ್ ಎನ್ನುವವರು ದಡ ಕುಸಿದು ಬಿದ್ದುದರಿಂದ ಆ ಮಣ್ಣಿನ ಅಡಿಯಲ್ಲಿ ಸಿಕ್ಕಿ ಹಾಕಿಕೊಂಡು ಸತ್ತು ಹೋಗಿದ್ದಾರೆ. ಅನಂತರ ೪ ದಿವಸಗಳ ನಂತರ ಬೇರೆ ಕಡೆಯಿಂದ ಕ್ರೇನ್ ತರಿಸಿ ಮಣ್ಣಿನಿಂದ ಆ ಹೆಣವನ್ನು ಹೊರಕ್ಕೆ ತೆಗೆದಿದ್ದಾರೆ. ಇವರಿಬ್ಬರೂ ಕೂಲಿ ಮಾಡತಕ್ಕ ಜನ, ಹಿಂದುಳಿದ ವರ್ಗಕ್ಕೆ ಸೇರಿದವರು. ಒಬ್ಬರು ೧ ವರ್ಷಗಳ ಹಿಂದೆ ಮದುವೆ ಮಾಡಿಕೊಂಡಿರತಕ್ಕವರು ಇನ್ನೊಬ್ಬರು ಮದುವೆಗೋಸ್ಕರ ಸಿದ್ಧತೆ ಮಾಡಿಕೊಂಡಿದ್ದರು, ಆದುದರಿಂದ ಅಕಾಲ ಮರಣದಿಂದ ಅವರ ಕುಟುಂಬಕ್ಕೆ ತುಂಬಾ ಹಾನಿಯಾಗಿರುವ ಕಾರಣ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಸ್ವಲ್ಪ ಮಟ್ಟಿಗೆ ಹೆಚ್ಚಿನ ಪರಿಹಾರವನ್ನು ಕೊಡಬೇಕೆಂದು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಕಾನೂನಿನ ಚೌಕಟ್ಟಿನೊಳಗೆ ಪರಿಶೀಲನೆ ಮಾಡಿ ಏನು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ಹೇಳಂತ್ಕೇನೆ.